**ಚಾಸಾ-1 ಪ್ರಾಸಾ-1**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ.12249/2018**

| | |
|---|---|
| **ಸಾಕ್ಷಿದಾರರ ಹೆಸರು** | ಭಾರತಿ ಶ್ರೀಧರ್ ರಾವ್. |
| **ತಂದೆಯ ಹೆಸರು** | ಶ್ರೀಧರ್ ರಾವ್. |
| **ವಯಸ್ಸು** | 43 ವರ್ಷ |
| **ಉದ್ಯೋಗ** | ಅಕೌಂಟೆಂಟ್, ಲಿಬರ್ಟಿ ಕಂಪನಿ. |
| **ವಾಸ** | ಮಲ್ಲೇಶ್ವರಂ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 29.11.2025. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಸಾಕ್ಷಿಯ ನ್ಯಾಯಾಲಯದ ಮುಂದೆ ಇರುವ ಎರಡನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಒಂದನೇ ಆರೋಪಿ ಈ ದಿನ ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ. ಚಾಸಾ-6, 7 ಮತ್ತು 10 ರವರು ಗೊತ್ತು. ಒಂದನೇ ಆರೋಪಿಯು ನನಗೆ ಸುಮಾರು 10 ವರ್ಷಗಳಿಂದ ಪರಿಚಯವಿರುತ್ತಾರೆ. ಅವರು ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿದ್ದರು. ಒಂದನೇ ಆರೋಪಿಯು ಎರಡನೇ ಆರೋಪಿ ಯನ್ನು ನನಗೆ ಪರಿಚಯ ಮಾಡಿ ಕೊಟ್ಟಿರುತ್ತಾರೆ. ಎರಡನೇ ಆರೋಪಿಯು ತಾನು ಐಸಿಐಸಿಐ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೇನೆ, ರೂ.5ಲಕ್ಷ ಲೋನ್ ಮಾಡಿಸಿಕೊಡುವುದಾಗಿ ನನ್ನಿಂದ ರೂ.75,000/- ಹಣವನ್ನು ನಗದಾಗಿ ಪಡೆದಿರುತ್ತಾರೆ. ಅದೇ ರೀತಿ ಎರಡನೇ ಆರೋಪಿಯು ರೂ.5ಲಕ್ಷ ಹಣದಲ್ಲಿ ರೂ.2,50,000/- ಸಬ್ಸಿಡಿ ಇರುತ್ತದೆ, ಉಳಿದ ರೂ.2,50,000/- ಹಣವನ್ನು ಬ್ಯಾಂಕಿಗೆ ಸಂದಾಯ ಮಾಡಬೇಕು ಎಂದು ಹೇಳಿರುತ್ತಾರೆ. ನಾನು ಒಂದನೇ ಆರೋಪಿ ಮುತ್ತುಲಕ್ಷ್ಮಿ ರವರ ಮನೆಯಲ್ಲಿ ಎರಡನೇ ಆರೋಪಿಗೆ ರೂ.75,000/- ಹಣವನ್ನು ನೀಡಿರುತ್ತೇನೆ. ಎರಡನೇ ಆರೋಪಿಯನ್ನು ಸಾಲದ ಹಣದ ಬಾಬ್ತು ವಿಚಾರಣೆ ಮಾಡಿದಾಗ ನಿಮ್ಮ ಮನೆಯನ್ನು ಪರಿಶೀಲನೆ ಮಾಡಬೇಕು ಎಂದು ಒಬ್ಬ ಲೋಕೇಶ್ ಎನ್ನುವ ವ್ಯಕ್ತಿಯನ್ನು ಕಳುಹಿಸಿ ಪರಿಶೀಲನೆ ಮಾಡಿರುತ್ತಾರೆ. ಸುಮಾರು ಮೂರ್ನಾಲ್ಕು ತಿಂಗಳಾದರೂ ಎರಡನೇ ಆರೋಪಿಯು ನನಗೆ ಯಾವುದೇ ಸಾಲವನ್ನು

ಕೊಡಿಸಲಿಲ್ಲ. ಎರಡನೇ ಆರೋಪಿಯನ್ನು ಸಾಲದ ಬಗ್ಗೆ ಕೇಳಿದಾಗ ಒಂದನೇ ಆರೋಪಿಯನ್ನು ಕೇಳಿ ಎಂದು ಹೇಳುತ್ತಾರೆ. ಒಂದನೇ ಆರೋಪಿಯನ್ನು ಕೇಳಿದರೇ ಎರಡನೇ ಆರೋಪಿಯನ್ನು ಕೇಳಿ ಎಂದು ಹೇಳಿರುತ್ತಾರೆ. ಒಂದನೇ ಆರೋಪಿಯ ಎಸ್.ಬಿ.ಐ ಅಕೌಂಟ್ ಗೆ ಸಾಲದ ಹಣವೂ ಬರುತ್ತದೆ ಎಂದು ಹೇಳಿರುತ್ತಾರೆ. ಅದು ಬಂದ ನಂತರ ನೀವು ತೆಗೆದುಕೊಂಡು ಹೋಗಬಹುದು ಎಂದು ಎರಡನೇ ಆರೋಪಿಯು ಹೇಳಿರುತ್ತಾರೆ. ಒಂದು ಮತ್ತು ಎರಡನೇ ಆರೋಪಿತರ ಮನೆಯ ಬಳಿ ನಾನು ಮತ್ತು ನನ್ನ ಗಂಡನ ಅಕ್ಕನ ಮಗಳು ಹಾಗೂ ಲೋಕೇಶ್ ಎನ್ನುವವರು ಹೋಗಿ ಕೇಳಿದಾಗ ರೂ.1,12,000/- ಗಳಿಗೆ ಎರಡನೇ ಆರೋಪಿಯು ಚೆಕ್ಕನ್ನು ನೀಡಿರುತ್ತಾರೆ ಮತ್ತು ನನ್ನ ಪೋಟೊವನ್ನು ಸಹ ತೆಗೆದುಕೊಂಡಿರುತ್ತಾರೆ. ನಾನು ಸದರಿ ಚೆಕ್ಕನ್ನು ತೆಗೆದುಕೊಂಡು ಹೋಗಿ ಕೆನರಾ ಬ್ಯಾಂಕಿಗೆ ಹಾಜರು ಪಡಿಸಿದಾಗ ಎರಡನೇ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹ ಬಂದಿರುತ್ತದೆ. ಪುನಃ ಹೋಗಿ ಒಂದನೇ ಆರೋಪಿಯ ಮನೆಗೆ ನೀವು ನೀಡಿರುವ ಚೆಕ್ಕಿಗೆ ಸಂಬಂದಪಟ್ಟಂತೆ ಯಾವುದೇ ಹಣ ಇಲ್ಲ ಎಂದು ಹೇಳಿರುತ್ತೇವೆ. ಆರೋಪಿತರಿಗೆ ನಾನುಕೊಟ್ಟ ಹಣವನ್ನು ವಾಪಸ್ ಕೊಡಿ ಎಂದು ಕೇಳಿದಾಗ ಅವರು ವಾಪಸ್ ಕೊಡುವುದಿಲ್ಲ, ಏನು ಬೇಕಾದರೂ ಮಾಡಿಕೊಳ್ಳಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ನಾನು ವೈಯಾಳಿಕಾವಲ್ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು. ಅದನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದನೇ ಆರೋಪಿಯು ನನಗೆ ನೀಡಿರುವ ಎಸ್ ಬಿ ಎಂ ಬ್ಯಾಂಕಿನ ಚೆಕ್ಕನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ನಂತರ ಪೊಲೀಸರು ಒಂದು ಮತ್ತು ಎರಡನೇ ಆರೋಪಿತರನ್ನು ಕರೆಸಿರುತ್ತಾರೆ.

**ಪಾಟೀ ಸವಾಲು : ಶ್ರೀ. ವಿಎಸ್ ಒಂದು ಮತ್ತು ಎರಡನೇ ಆರೋಪಿತರ ಪರ ವಕೀಲರಿಂದಃ**

ನಾನು ಬಿಕಾಂ ಪದವೀಧರೆ. ನಾನು ಮೂರು ಬ್ಯಾಂಕುಗಳಲ್ಲಿ ಖಾತೆಗಳನ್ನು ಹೊಂದಿರುತ್ತೇನೆ. ನಾನು ಅಕೌಂಟೆಂಟ್ ಆಗಿರುವುದರಿಂದ ಮತ್ತು ಬಿಕಾಂ ಪದವೀಧರೆಯಾಗಿದ್ದರಿಂದ ನನಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ಚೆನ್ನಾಗಿ ಗೊತ್ತು ಹಾಗೂ ಬ್ಯಾಂಕ್ ವ್ಯವಹಾರವನ್ನು ಸಹ ಚೆನ್ನಾಗಿ

ಮಾಡುತ್ತಿದ್ದೇನೆ ಎಂದರೆ ಸರಿ. ನಾನು ಆರೋಪಿತರಿಗೆ ಹಣವನ್ನು ಕೊಟ್ಟಿರುವ ದಿನಾಂಕ ಮತ್ತು ತಿಂಗಳು ನೆನಪಿಲ್ಲ. ನಾನು ಆರೋಪಿತರಿಗೆ 2014 ರಲ್ಲಿ ಹಣವನ್ನು ಕೊಟ್ಟಿರುತ್ತೇನೆ. ನಾನು ಆರೋಪಿತರಿಗೆ ಹಣ ಕೊಟ್ಟ ಬಗ್ಗೆ ಯಾವುದೇ ದಾಖಲೆ ನನ್ನ ಬಳಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ನಗದಾಗಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾನು ಬ್ಯಾಂಕ್ ವ್ಯವಹಾರವನ್ನು ಮಾಡುತ್ತಿದ್ದರಿಂದ ಬ್ಯಾಂಕಿನಲ್ಲಿ ಲೋನ್ ಪಡೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನನಗೆ ಲೋನ್ ಅವಶ್ಯಕತೆ ಇರಲಿಲ್ಲ ಎಂದು ಹೇಳುತ್ತಾರೆ. ಆರೋಪಿತರು ನನಗೆ ಬ್ಯಾಂಕಿನಲ್ಲಿ ಲೋನ್ ಕೊಡಿಸುತ್ತೇನೆ ಎಂದು ಹೇಳಿರುವ ಸಂಬಂಧ ನಾನು ಯಾವುದೇ ಬ್ಯಾಂಕಿಗಾಗಲೀ ಅಥವಾ ಇಲಾಖೆಗಳಿಗೆ ಹೋಗಿ ವಿಚಾರಣೆ ಮಾಡಿರುವುದಿಲ್ಲ. ಆರೋಪಿತರು ರೂ.2,50,000/- ಸಬ್ಸಿಡಿ ಹಣವನ್ನು ಕೊಡಿಸುತ್ತೇನೆ ಎಂದು ಹೇಳಿರುವ ಸಂಬಂಧ ಯಾವ ಇಲಾಖೆಯಲ್ಲಿ ಮತ್ತು ಯಾವ ಉದ್ದೇಶಕ್ಕೆ ಕೊಡಿಸುತ್ತಾರೆ ಎನ್ನುವ ವಿಚಾರವನ್ನು ನಾನು ನನ್ನ ದೂರಿನಲ್ಲಾಗಲೀ ಅಥವಾ ವಿಚಾರಣೆಯಲ್ಲಾಗಲೀ ಹೇಳಿರುವುದಿಲ್ಲ. ಆರೋಪಿತರು ನನಗೆ ನಂಬಿಕಸ್ತ ಗೆಳೆಯತಿಯಾರಾಗಿದ್ದರಿಂದ ಅವರು ಹೇಳಿದ ಮಾತನ್ನು ಕೇಳಿಕೊಂಡು ನಾನು ಅವರಿಗೆ ಹಣವನ್ನು ನೀಡಿರುತ್ತೇನೆ. ನಾನು 2014 ರಲ್ಲಿ ನಾನು ಆರೋಪಿತರಿಗೆ ಹಣವನ್ನು ನೀಡಿರುತ್ತೇನೆ. ದೂರಿನಲ್ಲಿ ನಾನು ಹಣವನ್ನು ಈ ದೂರನ್ನು ಕೊಡುವ ಮುನ್ನ ಮೂರು ವರ್ಷಗಳ ಮುಂಚೆ ಕೊಟ್ಟಿರುತ್ತೇನೆ ಎಂದು ಹೇಳಿರುತ್ತೇನೆ. ಸುಮಾರು ವರ್ಷಗಳಾಗಿರುವುದರಿಂದ ದಿನಾಂಕ ನೆನಪಿಲ್ಲ. ನಾನು ಹಣವನ್ನು ನೀಡುವ ಸಮಯದಲ್ಲಿ ಲಿಬರ್ಟಿ ಕಂಪನಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ.

2. ನನ್ನ ಗಂಡ ಶ್ರೀಧರ್ ರವರು ಕಾಂಗ್ರೇಶ್ ಪಕ್ಷದ ಕಾರ್ಯಕರ್ತ ಎಂದರೆ ನನಗೆ ಗೊತ್ತಿಲ್ಲ. ನನ್ನ ಮೈದುನ ಆನಂತ ರಾವ್ ಸಹ ಕಾರ್ಯಕರ್ತರು ಎಂದರೆ ನನಗೆ ಗೊತ್ತಿಲ್ಲ. ಒಂದನೇ ಆರೋಪಿಯು ಸಹ ಕಾಂಗ್ರೇಶ್ ಪಕ್ಷದಲ್ಲಿ ಕಾರ್ಯಕರ್ತರಾಗಿ ಮತ್ತು ಸಮಾಜ ಸೇವೆ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಒಂದನೇ ಆರೋಪಿಗೂ ನನ್ನ ಮೈದುನ ಆನಂತ ರಾವ್ ಗೂ ದ್ವೇಷ ಇರುತ್ತದೆ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಯಾವುದೇ ಹಣ ಕೊಟ್ಟಿಲ್ಲ ಮತ್ತು ಅವರು ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ.ಆರೋಪಿತರು ನನಗೆ ಸಬ್ಸಿಡಿ

**ಚಾಸಾ-1 ಪ್ರಾಸಾ-1**

ಲೋನ್ ಕೊಡಿಸುತ್ತೇನೆ ಎಂದು ನನ್ನಿಂದ ಹಣ ಪಡೆದಿರುತ್ತಾರೆ. ಸಬ್ಸಿಡಿ ಲೋನ್ ಗೆ ಸಂಬಂಧ ಪಟ್ಟಂತೆ ಆರೋಪಿತರು ನನಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ಒಂದನೇ ಆರೋಪಿಯು ನನಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ ಮತ್ತು ನಾನು ಆ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ಒಂದನೇ ಆರೋಪಿಯು ಅವರ ತಮ್ಮ ಲೋಕೇಶ್ ರವರನ್ನು ನಮ್ಮ ಮನೆಗೆ ಕಳುಹಿಸಿರುತ್ತಾರೆ. ಆಗ ನಾನು ಅವರನ್ನು ಯಾವ ಬ್ಯಾಂಕಿನವರು ಎಂದು ವಿಚಾರಣೆ ಮಾಡಿರುವುದಿಲ್ಲ. ಯಾವ ಬ್ಯಾಂಕಿನವರು ಸಹ ನಮ್ಮ ಮನೆಯ ಬಳಿ ಬಂದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಂದನೇ ಆರೋಪಿಯು ಬ್ಯಾಂಕಿಗೆ ಸಂಬಂದಪಟ್ಟ ಎಲ್ಲಾ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುವುದಾಗಿ ಹೇಳಿದ್ದರು ಎಂದು ಹೇಳುತ್ತಾರೆ. ಆರೋಪಿತರಿಗೆ ರೂ.75,000/- ಹಣವನ್ನು ಚೆಕ್ ಅಥವಾ ಡಿಡಿ ಮೂಲಕ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ತೊಂದರೆ ಇತ್ತು, ಸದರಿ ಹಣವನ್ನು ನಾನು ನನ್ನ ಚಿನ್ನಾಭರಣಗಳನ್ನು ಅಡಮಾನ ಮಾಡಿ ಹಣ ಪಡೆದು ಸದರಿ ಹಣವನ್ನು ಆರೋಪಿತರಿಗೆ ನೀಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡ ಮತ್ತು ಮೈದುನನ ಮಾತನ್ನು ಕೇಳಿಕೊಂಡು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-6 ರಿಂದ 19 ಸಾಕ್ಷಿದಾರರನ್ನು ನಾನೇ ಸೃಷ್ಟಿಸಿ ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸಾಕ್ಷಿ ಅವರ್ಯಾರು ಸಹ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**

**ಬೆಂಗಳೂರು.**